**ದಿನಾಂಕಃ 25-04-2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ಶ್ರೀ.ಎಂ.ಟಿ.ಜಿ. ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಅಂಶಗಳು ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ನಮ್ಮ ತಂದೆಯಾದ ಸುಬ್ಬರಾಯಪ್ಪರವರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ನನ್ನ ತಂದೆ 1986 ರಲ್ಲಿ ಮೃತರಾಗಿರುತ್ತಾರೆ. ನನ್ನ ತಂದೆಗೆ 6 ಜನ ಮಕ್ಕಳು ಅದರಲ್ಲಿ 1 ನೇ ಶ್ರೀನಿವಾಸ ಹಾಲಿ ಮೃತರಾಗಿ ವಾದಿ ಹೆಂಡತಿ/ಗೀತ, 2 ನೇ ಉಮಾ ದೇವಿ, 3 ನೇ ಮಂಜುಳ, 4 ನೇ ಶಾಂತರಾಜು (ನಾನು), 5 ನೇ ರಾಜು ಮತ್ತು 6 ನೇ ನಾಗಮಣಿ ಆಗಿರುತ್ತಾರೆ. ನನ್ನ ತಾಯಿ ಲಕ್ಷ್ಮಮ್ಮ ಮೃತರಾಗಿ 5 ವರ್ಷ ಆಗಿರುತ್ತದೆ. ನನ್ನ ತಂದೆ ತಾಯಿ ಮೃತರಾದ ನಂತರ ಮಕ್ಕಳೆಲ್ಲಾರೂ ದಾವಾ ಆಸ್ತಿ ನೋಡಿಕೊಳ್ಳುತ್ತಿರುತ್ತಾರೆ.

2. ದಾವಾ ಆಸ್ತಿಗಳು ನಮ್ಮ ಕುಟುಂಬದ ವಿಭಾಗ ಆಗಿಲ್ಲ. ವಾದಿ ಭಾಗ ಕೇಳಿದಾಗ ಭಾಗ ಇಲ್ಲ ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿಯು ಹಣ ಕೊಡುವಂತೆ ಕೇಳಿದಾಗ ಹಣ ಕೊಟ್ಟಿರುತ್ತೇನೆ ಯಾವುದೇ ಭಾಗ ಕೇಳಿರುವುದಿಲ್ಲ. ವಾದಿ ಯಾವುದೇ ಹಣ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 2 ನೇ ಪ್ರತಿವಾದಿ ವಾದಿಗೆ ಭಾಗ ಕೊಡಬಾರದೆಂದು ತೀರ್ಮಾನ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ನಿಡಿ-1 ರ ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಗೆ ಅಪಘಾತದಿಂದ ಗಾಯಗಳಾದಾಗ ನಾನು ಮತ್ತು 2 ನೇ ಪ್ರತಿವಾದಿ ಕರೆದುಕೊಂಡು ಹೋಗುತ್ತಿರುತ್ತೇವೆ ಎಂದರೆ ಸಾಕ್ಷಿಯು 1 ಭಾರಿ ಕರೆದುಕೊಂಡು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನಾನು ವಾದಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಬಲವಂತವಾಗಿ ನಿಡಿ-1 ರ ಹಕ್ಕು ನಿವೃತ್ತಿ ಪತ್ರಕ್ಕೆ ಸಹಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-1 ರ ನಿವೃತ್ತಿ ಪತ್ರದಲ್ಲಿ ದಾವಾ ಸ್ವತ್ತುಗಳ ಸ.ನಂ. ನಮೂದಾಗಿರುವುದಿಲ್ಲ ಎಂದರೆ ಸರಿ. ನಿಡಿ-1 ರ ಹಕ್ಕು ನಿವೃತ್ತಿ ಪತ್ರವನ್ನು ವಾದಿ ಒಬ್ಬರೇ ಇದ್ದಾಗ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.1 ರ ಬಗ್ಗೆ ವಾದಿಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಡಿ.1 ರ ದಾಖಲೆಯಲ್ಲಿರುವ

ಸಾಕ್ಷಿಗಳು ನನಗೆ ಬೇಕಾದವರು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಕಟ್ಟಡ ಕಟ್ಟಲು ನ್ಯಾಯಾಲಯದ ಒಪ್ಪಿಗೆ ಪಡೆದಿರುತ್ತೇನೆ. ನಿಡಿ.1 ರ ನಿವೃತ್ತಿ ಪತ್ರದ ರೂ.5,00,000/- ವನ್ನು ಚೆಕ್ ಮೂಲಕ ಕೊಟ್ಟಿರುತ್ತೇನೆ ಆದರೆ ಚೆಕ್ ನಂ. ಹಾಕಿರುವುದಿಲ್ಲ. ನಿಡಿ.1 ರ ನಿವೃತ್ತಿ ಪತ್ರದಲ್ಲಿ ವಾದಿಗೆ ನಗದಾಗಿ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ಉಪ ನೊಂದಾಣಾಧಿಕಾರಿಗಳ ಆದೇಶದಂತೆ ನಗದು ಕೊಡದೇ ಚೆಕ್ ಕೊಟ್ಟಿರುತ್ತೇನೆ. ವಾದಿಗೆ ರೂ.15,00,000/- ಹಣ ಕೊಟ್ಟಿರುತ್ತೇನೆ. ನಾನು ಹೇಳಿದಂತೆ ವಾದಿಗೆ ಯಾವುದೇ ಹಣ ಕೊಡದೇ ಸುಳ್ಳು ದಾಖಲೆಗಳನ್ನು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸೇರಿದ ಬ್ಯಾಂಕ್ ಪಾಸ್ ಪುಸ್ತಕವನ್ನು ನಾನೇ ಮಾಡಿಸಿ ಡೆಬಿಟ್ ಕಾರ್ಡ್ ಸಮೇತ ನಾನೇ ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಯಾವುದೇ ಹಣ ಕೊಡದೇ ನಾನೇ ನಗದೀಕರಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಮೌಲ್ಯ ಎಷ್ಟು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಮೌಲ್ಯ ರೂ.50,00,00,000/- ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಹೊಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ಶಿರಾ.